ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 04 ಇಎಸ್‌ಟಿ 4 ಬಿ 2015 /588

ನಿರ್ದೇಶಕರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ: 22.05.2015

## ಸುತ್ತೋಲೆ

ವಿಷಯ: ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್ ಸಂಸ್ಥೆಗಳ ಸಿಬ್ಬಂದಿಗಳ ಸೇವಾಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ-407.

*-*-*-*-*

ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸೇವಾಪುಸ್ತಕಗಳಲ್ಲಿ ನಾಮನಿರ್ದೇಶನ ಪತ್ರ, ಜಾತಿ ಪ್ರಮಾಣಪತ್ರ, ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಸಿಬ್ಬಂದಿಗಳಿಂದ ಪಡೆದು ಸೇವಾಪುಸ್ತಕದಲ್ಲಿ ಲಗತ್ತಿಸಲು ಕ್ರಮ ಕೈಗೊಳ್ಳತಕ್ಕದ್ದು.

ಮುಂದುವರೆದು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 407 ರಂತೆ ನೌಕರರಿಗೆ ಪ್ರತಿ ವರ್ಷವೂ ಅವರ ಸೇವಾಪುಸ್ತಕಗಳನ್ನು ತೋರಿಸಿ ಸೇವಾಪುಸ್ತಕವನ್ನು ನಿರೀಕ್ಷಿಸಿದ ಬಗ್ಗೆ ಅವರಿಂದ ಸಹಿ ಪಡೆದುಕೊಳ್ಳಬೇಕಾದುದು ಕಛೇರಿಯ ಮುಖ್ಯಾಧಿಕಾರಿಯ ಕರ್ತವ್ಯವಾಗಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ಹಾಗೆ ನಿರೀಕ್ಷಿಸಿದ ಬಗ್ಗೆ ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳ ಅಂತ್ಯದೊಳಗಾಗಿ ಅವನು ತನ್ನ ಮೇಲಾಧಿಕಾರಿಗೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ನೌಕರರು ಇತರ ವಿಷಯಗಳ ಜೊತೆಗೆ ತಮ್ಮ ಸಹಿಗಳನ್ನು ಮಾಡುವ ಮೊದಲು ತಮ್ಮ ಸೇವೆಗಳನ್ನು ಸರಿಯಾಗಿ ನೋಡಲಾಗಿದೆ ಮತ್ತು ಹಾಗೆಂದು ಪ್ರಮಾಣಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಅಲ್ಲದೆ ಪ್ರತಿಯೊಬ್ಬ ನೌಕರನ ಸೇವಾಪುಸ್ತಕದಲ್ಲಿ ನಮೂದಿಸಿರುವ ಜನ್ಮದಿನಾಂಕವನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಖಚಿತಪಡಿಸಿಕೊಂಡು ಕಛೇರಿ ಮುಖ್ಯಸ್ಥರು ದೃಢೀಕರಿಸತಕ್ಕದ್ದು ಹಾಗೂ ನೌಕರರ ಪತಿ/ಪತ್ನಿಯೊಂದಿಗಿನ ಭಾವಚಿತ್ರವನ್ನು ಸೇವಾಪುಸ್ತಕದಲ್ಲಿ ಅಂಟಿಸಿರುವುದನ್ನು ಖಚಿತಪಡಿಸಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

~~ಆಡಳಿತಾಧಿಕಾರಿ~~

ಇವರಿಗೆ

ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು.

ಪ್ರತಿ: 1. ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ.